2. ಪುನರಾವಲೋಕನೆ, ಮೇಲ್ಮನವಿಗೆ ಒಳಪಡುವ ಕಾನೂನಿನಡಿ ಹೊರಡಿಸುವ ಆದೇಶಗಳು.

3. ನ್ಯಾಯಾಲಯಗಳೊಂದಿಗೆ ವ್ಯವಹರಿಸುವ ಪತ್ರ ವ್ಯವಹಾರ.

4. ಜಿಲ್ಲಾ ಮಟ್ಟಕ್ಕಿಂತ ಅಧಿಕ ಮಟ್ಟದ ರಾಜ್ಯ ಕಚೇರಿಗಳ ನಡುವಣ ಪತ್ರ ವ್ಯವಹಾರ ಆಡಳಿತ ಕಾರಣಕ್ಕಾಗಿ ಅಥವಾ ತಾಂತ್ರಿಕ ಅಥವಾ ವೈಜ್ಞಾನಿಕ ಗುಣಗಳನ್ನು ಹೊಂದಿರುವ ವಿಷಯಗಳಲ್ಲಿ.

ಯಾವುದೇ ತಾಲ್ಲೂಕಿನಲ್ಲಿ ಭಾಷಾ ಅಲ್ಪ-ಸಂಖ್ಯಾತರ ಜನಸಂಖ್ಯೆ ಶೇಕಡ 15 ಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ ;

1. ಅರ್ಜಿಗಳನ್ನು ಸ್ವೀಕರಿಸುವುದನ್ನು ಮತ್ತು ಅವುಗಳಿಗೆ ಉತ್ತರ ನೀಡುವುದನ್ನು ಆದಷ್ಟು ಮಟ್ಟಿಗೆ ;

2. ಭಿತ್ತಿ ಪತ್ರ, ಪ್ರಚಾರದ ವಿಷಯಗಳನ್ನು ನೀಡುವುದನ್ನು ;

3. ಸರ್ಕಾರಿ ಸೂಚನೆಗಳನ್ನು ಪ್ರಕಟಿಸುವುದನ್ನು ಸಂಬಂಧಪಟ್ಟ ಅಲ್ಪಸಂಖ್ಯಾತ ಭಾಷೆಯಲ್ಲಿ ರತಕ್ಕದ್ದು.

ಕನ್ನಡ ಅಥವಾ ಆಂಗ್ಲ ಭಾಷೆಯಲ್ಲಿ ಉತ್ತರಿಸಲು ಆಸ್ಪದವಿದೆ.

ಸಿ-ಗುಂಪಿಗೆ ಆಯ್ಕೆಯಾದವರು ಎಸ್. ಎಸ್. ಎಲ್. ಸಿ. ಯಲ್ಲಿ ಕನ್ನಡವನ್ನು ಕಲಿಯದಿದ್ದರೆ ನೇಮಕಾತಿ ಪೂರ್ವ ಕನ್ನಡ ಭಾಷಾ ಪರೀಕ್ಷೆಯನ್ನು ಪಾಸು ಮಾಡಬೇಕಾಗಿದೆ ಮತ್ತು ನೇಮಕವಾದ ನಂತರ ಪ್ರೊಬೇಷನರಿ ಅವಧಿಯಲ್ಲಿ ಇಲಾಖಾ ಕನ್ನಡ ಭಾಷಾ ಪರೀಕ್ಷೆಯನ್ನು ಪಾಸು ಮಾಡಬೇಕಾಗಿದೆ. ಆದುದರಿಂದ ಇದು ಸರ್ಕಾರದ ನೀತಿಗೆ ವಿರುದ್ಧವಾಗುವುದಿಲ್ಲ.

ವಿಷಯಃ ರಾಜ್ಯ ಮಂತ್ರಿಗಳ ದೆಹಲಿ ಪ್ರವಾಸದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 443(133ಎ)

ಶ್ರೀ ಡಿ.ಬಿ ಚಂದ್ರೇಗೌಡ (ತೀರ್ಥಹಳ್ಳಿ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1992-93ರಲ್ಲಿ ಹಾಗೂ 1993-94ರಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಎಷ್ಟು ಬಾರಿ ರಾಜ್ಯಮಂತ್ರಿಗಳು ದೆಹಲಿಗೆ ಭೇಟಿ ಕೊಟ್ಟಿದ್ದಾರೆ : ಇದರ ಉದ್ದೇಶವೇನು. ಇದರಿಂದ ಸರ್ಕಾರಕ್ಕೆ ತಗುಲಿದ ವೆಚ್ಚವೆಷ್ಟು ?

ಶ್ರೀ. ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಅ) ರಾಜ್ಯ ಸಚಿವರುಗಳು ಕಳೆದೆರಡು ವರ್ಷಗಳಿಂದ ದೆಹಲಿಗೆ ಪ್ರವಾಸ ಮಾಡಿದ ವಿವರಗಳ ಪಟ್ಟಿಯನ್ನು ಇದರೊಡನೆ ಲಗತ್ತಿಸಲಾಗಿದೆ.

ವಿಷಯ : ಕ್ಯಾಬಿನೆಟ್ ಸಚಿವರ ದೆಹಲಿ ಪ್ರವಾಸದ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 444 (133)

ಶ್ರೀ. ಡಿ. ಬಿ. ಚಂದ್ರೇಗೌಡ (ತೀರ್ಥಹಳ್ಳಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1992-93, 1993-94ರಲ್ಲಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಕ್ಯಾಬಿನೆಟ್ ಸಚಿವರು ದೆಹಲಿಗೆ ಎಷ್ಟು ಬಾರಿ ಭೇಟಿ ಕೊಟ್ಟಿದ್ದಾರೆ : ಇದರ ಉದ್ದೇಶವೇನು : ಇದರಿಂದ ಸರ್ಕಾರಕ್ಕೆ ತಗುಲಿದ ವೆಚ್ಚವೆಷ್ಟು :

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ) ಕ್ಯಾಬಿನೆಟ್ ಸಚಿವರುಗಳು ಕಳೆದ ಎರಡು ವರ್ಷಗಳಿಂದ ದೆಹಲಿಗೆ ಪ್ರವಾಸದ ಮಾಡಿದ ವಿವರಗಳ ಪಟ್ಟಿಯನ್ನು ಇದರರೊಡನೆ ಲಗತ್ತಿಸಲಾಗಿದೆ.